<u>ಹಿರಿಯ **ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**</u>

<u>ನಾಗಮಂಗಲ.</u>

**<u>ಸಿ ಸಿ ನಂಃ 1061/2022</u>**

| | | | | |
|---|---|---|---|---|
| **ಸಾಕ್ಷಿಯ ಹೆಸರು** | ಃ | ಜೆ. ಎನ್. ಪ್ರಮೋದ್ ಕುಮಾರ್ | **ದಿನಾಂಕ** | **14-07-2025** |
| ಗಂಡನ **ಹೆಸರು** | ಃ | ನರಸಿಂಹೇಗೌಡ | **ಸಿ ಡಬ್ಲ್ಯೂ** | **03** |
| **ವಯಸ್ಸು** | ಃ | **41 ವರ್ಷ** | **ಪಿ ಡಬ್ಲ್ಯೂ** | **02** |
| **ಉದ್ಯೋಗ** | ಃ | ಅಬಕಾರಿ ಮುಖ್ಯ ಪೇದೆ, ಕುಣಿಗಲ್ ಅಬಕಾರಿ ನಿರೀಕ್ಷಕರ ಕಛೇರಿ. | | |
| **ವಿಳಾಸ** | ಃ | ಕುಣಿಗಲ್. | | |

**ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಸಸಅ ರವರಿಂದ ಃ-</u>**

ನಾನು ಜುಲೈ **2013** ರಿಂದ ಫೆಬ್ರುವರಿ **2024** ರವರೆಗೆ ನಾಗಮಂಗಲ ತಾಲ್ಲೋಕಿನ ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಪೇದೆಯಾಗಿ ಕೆಲಸ ನಿರ್ವಹಿಸಿದ್ದೇನು.

ದಿಃ **31-05-2022** ರಂದು ನಾನು ನನ್ನ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಸಂಜೆ **04 – 45** ಗಂಟೆಯ ಸಮಯದಲ್ಲಿ ಬೆಳ್ಳೂರು ಕ್ರಾಸ್ ನಿಂದ ಒಬ್ಬ ವ್ಯಕ್ತಿ ಗಾಂಜಾ ಖರೀದಿ ಮಾಡಲು ನಾಗಮಂಗಲಕ್ಕೆ ಬರುತ್ತಿದ್ದಾರೆ ಎಂದು ಪ್ರಾಸಾ.**1** ರವರಿಗೆ ಮಾಹಿತಿ ಬಂದಿದ್ದು ಆ ಬಗ್ಗೆ ಅವರು ಪಾಂಡವಪುರ ಅಬಕಾರಿ ಡಿ.ವೈ.ಎಸ್.ಪಿ. ಗೆ ಮಾಹಿತಿ ನೀಡಿದ್ದು ನಂತರದಲ್ಲಿ ದಾಳಿ ನಡೆಸಲು ಹೋಗಬೇಕು ಎಂದು ಪ್ರಾಸಾ.**1** ರವರು ನನ್ನನ್ನು, ಚಾಸಾ.**4** ರಿಂದ **6** ರವರನ್ನು ಹಾಗೂ ಚಾಸಾ.**9** ರವರನ್ನು ಕರೆದುಕೊಂಡು ನಮ್ಮ ಇಲಾಖಾ ಜೀಪ್ ನಲ್ಲಿ ಟಿ. ಬಿ. ಬಡಾವಣೆಯ ಬಳಿ ಇರುವ ಆಟೋ ನಿಲ್ದಾಣದ ಬಳಿ ಕರೆದುಕೊಂಡು ಹೋದರು. ಸುಮಾರು **05 – 10** ಗಂಟೆಯ ಸಮಯದಲ್ಲಿ ಕಪ್ಪು ಟೀ ಶರ್ಟ್ ಹಾಗೂ ಕಪ್ಪು ಪ್ಯಾಂಟ್ ಧರಿಸಿದ್ದ ಒಬ್ಬ ವ್ಯಕ್ತಿ ಬೆಳ್ಳೂರು ಕ್ರಾಸ್ ಕಡೆಯಿಂದ ಆಟೋದಲ್ಲಿ ಬಂದು ಟಿ. ಬಿ. ಬಡಾವಣೆಯ ವೃತ್ತದ ಬಳಿ ಇಳಿದರು. ಆತನ ಮೇಲೆ ಅನುಮಾನಗೊಂಡು ಪ್ರಾಸಾ.**1** ರವರು ಆತನನ್ನು ಕರೆದು ವಿಚಾರಿಸಲಾಗಿ ಆತನು ಗಾಬರಿಗೊಂಡು ನಂತರ ಹುಸೇನ್ ಬಿ ಎಂಬುವವರು ಗಾಂಜಾ ಮಾರಾಟ ಮಾಡುತ್ತಿದ್ದು ಆತನು ಅದನ್ನು ಖರೀದಿ ಮಾಡಲು ಬಂದಿರುತ್ತೇನೆ ಎಂದು ತಿಳಿಸಿದರು. ಆತನ ಹೆಸರು ವಿಚಾರಿಸಲಾಗಿ ಆತನ ಹೆಸರು ಹರೀಶ್ ಎಂದು ತಿಳಿಸಿದರು. ನಂತರ ಸದರಿ ಹರೀಶ್ ರವರು ನಮ್ಮನ್ನು ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿಯ ಮನೆಯ ಬಳಿ ಹೋದಾಗ ಆರೋಪಿ ಮನೆಯ

ಹೊರಗೆ ನಿಂತಿದ್ದರು. ಆಗ ಪ್ರಾಸಾ.1 ರವರು ಸ್ಥಳದಲ್ಲಿದ್ದ ವ್ಯಕ್ತಿಗಳನ್ನು ಕರೆದು ದಾಳಿ ನಡೆಸಲು ಸಹಕರಿಸುವಂತೆ ಕೇಳಿದ್ದು ಆ ರೀತಿ ಸಹಕರಿಸಲು ಯಾರೂ ಸಹ ಒಪ್ಪದೆ ಇದ್ದ ಕಾರಣ ಪ್ರಾಸಾ.1 ರವರು ನಮ್ಮನ್ನು ಪಂಚರನ್ನಾಗಿ ಮಾಡಿ ಮನೆಯನ್ನು ಶೋಧಿಸಲು ಶೋಧನಾ ವಾರೆಂಟ್ ತಯಾರು ಮಾಡಿ ಅದಕ್ಕೆ ಆರೋಪಿಯ ಸಹಿ ಪಡೆದು ನಂತರ ಮನೆಯ ಒಳಗೆ ಹೋಗಿ ಶೋಧನೆ ಮಾಡಿದಾಗ ಮನೆಯ ಮುಖ್ಯ ಬಾಗಿಲಿನ ಬಲಬದಿಯಲ್ಲಿ ಒಂದು ಮಂಚ ಇದ್ದು ಅದರ ಮೇಲೆ ಒಂದು ಕಪ್ಪು ಬಣ್ಣದ ಕವರ್ ಇದ್ದು ಅದರಲ್ಲಿ ಏನನ್ನೋ ತುಂಬಿ ಇಟ್ಟಿರುವುದು ಕಂಡು ಬಂದಿತು. ಆಗ ಪ್ರಾಸಾ.1 ರವರು ಅದನ್ನು ತೆಗೆದು ನೋಡಲಾಗಿ ಅದರಲ್ಲಿ ಬಿಳಿಯ ಬಣ್ಣದ ಪ್ಯಾಕೇಟ್ ಇದ್ದು ಅದರಲ್ಲಿ ಗಾಂಜಾ ಇರುವುದು ಕಂಡು ಬಂದಿತು. ಅದರಂತೆ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿಯೂ ಸಹ ಗಾಂಜಾ ಇರುವುದು ಕಂಡು ಬಂದಿತು. ಕಾರಣ ಪ್ರಾಸಾ.1 ರವರು ಅದನ್ನು ತೂಕ ಮಾಡುವ ಯಂತ್ರದ ಮೂಲಕ ತೂಕ ಮಾಡಿದಾಗ ಅದು 95 ಗ್ರಾಂ ಇರುವುದು ಕಂಡು ಬಂದಿತು. ನಂತರ ಮನೆಯಲ್ಲಿ ಎಲ್ಲಾ ಹುಡುಕಿ ನೋಡಲಾಗಿ ಬೇರೆ ಯಾವುದೇ ಗಾಂಜಾ ಇರುವ ಬಗ್ಗೆ ಕಂಡು ಬಂದಿರುವುದಿಲ್ಲ. ನಂತರ ಪ್ರಾಸಾ.1 ರವರು ಸ್ಥಳದಲ್ಲಿ ಇದ್ದ ಗಾಂಜಾವನ್ನು ತಮ್ಮ ವಶಕ್ಕೆ ಪಡೆದು ಅದನ್ನು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅದರ ಮೇಲೆ ಇಲಾಖಾ ಮುದ್ರೆಯನ್ನು ಮಾಡಿರುತ್ತಾರೆ. ನಂತರ ಸದರಿ ಗಾಂಜಾವನ್ನು ವಶದಲ್ಲಿ ಇಟ್ಟುಕೊಳ್ಳಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಆರೋಪಿಯು ಆ ರೀತಿ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಆರೋಪಿಯ ಹೆಸರು ವಿಳಾಸ ಕೇಳಲಾಗಿ ಆಕೆಯ ಹೆಸರು ಹುಸೇನ್ ಬಿ ಎಂದು ತಿಳಿಸಿರುತ್ತಾರೆ. ನಂತರ ಪ್ರಾಸಾ.1 ರವರು ಆರೋಪಿಯನ್ನು ತಮ್ಮ ವಶಕ್ಕೆ ಪಡೆದು ಠಾಣೆಗೆ ತೆರಳಿ ಆರೋಪಿಯ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ. ಮಹಜರ್ ನ್ನು ಸಂಜೆ 05 – 30 ರಿಂದ 06 – 30 ಗಂಟೆಯ ವರೆಗೆ ಮಾಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

2. ಸಾಕ್ಷಿ ಶೋಧನಾ ವಾರೆಂಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿ ನಿಪಿ.1(ಬಿ) ಎಂದು, ಸಾಕ್ಷಿ ಜಪ್ತಿ ಪಟ್ಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಸಿದ್ದು, ಸಾಕ್ಷಿಯ ಸಹಿ ನಿಪಿ.2(ಬಿ) ಎಂದು, ಸಾಕ್ಷಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿ ನಿಪಿ.4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ನೋಡಿ ಗುರುತಿಸುತ್ತಾರೆ.

**3.** ನಂತರ ವಶಪಡಿಸಿಕೊಂಡ ಮಾಲನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗುವಂತೆ ಪ್ರಾಸಾ.**1** ರವರು ನಿವೇದನೆಯನ್ನು ತಯಾರಿಸಿ ಅದನ್ನು ತೆಗೆದುಕೊಂಡು ಹೋಗುವಂತೆ ನನ್ನ ಬಳಿ ನೀಡಿದ್ದು ನಾನು ಸದರಿ ನಿವೇದನೆಯನ್ನು ಸ್ವೀಕರಿಸಿ ಮಾಲನ್ನು ರಾಸಾಯನಿಕ ಪರೀಕ್ಷಾ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿ ಹಾಜರು ಪಡಿಸಿರುತ್ತೇನೆ. ಸಾಕ್ಷಿ ನಿವೇದನೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**9** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿ ನಿಪಿ.**9**(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಡಿ. ಆರ್. ಎಂ. ವಕೀಲರಿಂದ.

ನಮ್ಮ ಠಾಣೆಯಿಂದ ಹೊರಟು ಟಿ. ಬಿ. ಬಡಾವಣೆಯ ವೃತ್ತ ತಲುಪಿದಾಗ ಸಂಜೆ **05 – 00** ಗಂಟೆ ಆಗಿತ್ತು. ಸದರಿ ವೃತ್ತದ ಬಳಿ ಆಟೋ **05 – 10** ಗಂಟೆಗೆ ಬಂದಿತ್ತು. ಸದರಿ ಆಟೋ ನಂಬರ್ ನನಗೆ ಹೇಳಲು ಆಗುವುದಿಲ್ಲ. ಪ್ರಾಸಾ.**1** ರವರು ಸದರಿ ಆಟೋ ಚಾಲಕನ ಹೇಳಿಕೆ ಪಡೆದುಕೊಂಡಿರಲಿಲ್ಲ. ಸದರಿ ಆಟೋದಲ್ಲಿ ಸುಮಾರು **4** ಜನ ಇದ್ದರು. ಸದರಿ **4** ಜನರನ್ನು ವಿಚಾರಣೆ ಮಾಡಿರಲಿಲ್ಲ ಅಥವಾ ಅವರ ಹೇಳಿಕೆ ಪಡೆದುಕೊಂಡಿರಲಿಲ್ಲ. ಆಟೋ ಬಂದು ನಿಂತ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರಲಿಲ್ಲ ಅಥವಾ ಛಾಯಾ ಚಿತ್ರ ತೆಗೆದಿರಲಿಲ್ಲ. ಆಟೋ ನಿಂತ ಸ್ಥಳದಲ್ಲಿ ಹರೀಶ್ ರವರನ್ನು ಸುಮಾರು **10** ರಿಂದ **15** ನಿಮಿಷ ವಿಚಾರಣೆ ಮಾಡಲಾಗಿತ್ತು. ಆಟೋ ನಿಂತಿದ್ದ ಸ್ಥಳದಿಂದ ಆರೋಪಿಯ ಮನೆ ಸುಮಾರು ಅರ್ಧ ಕಿ. ಮೀ. ದೂರದಲ್ಲಿ ಇತ್ತು. ಸದರಿ ಹರೀಶ್ ರವರು ಆರೋಪಿಯ ಮನೆಯನ್ನು ತೋರಿಸಿರುತ್ತಾರೆ. ಆರೋಪಿಯ ಮನೆ ತಲುಪಿದಾಗ ಸುಮಾರು **05 – 30** ಗಂಟೆ ಆಗಿತ್ತು. ಶೋಧನಾ ವಾರೆಂಟ್ ನ್ನು ತಯಾರಿಸಿ ಆರೋಪಿಯ ಮನೆಯ ಒಳಗೆ ಹೋಗಲು ಸುಮಾರು ಅರ್ಧ ಗಂಟೆ ಬೇಕಾಯಿತು. ಆರೋಪಿಯ ಮನೆಯ ಬಳಿ ನಮ್ಮ ಅಂಗ ಶೋಧನಾ ಮಹಜರ್ ನ್ನು ಮಾಡಿರಲಿಲ್ಲ. ನಮ್ಮ ಬಳಿ ಸಲಕರಣೆಗಳು ಇದ್ದವು ಎಂದು ತೊರಿಸುವ ಬಗ್ಗ ಸಲಕರಣಾ ಪಟ್ಟಿ ತಯಾರು ಮಾಡಿರಲಿಲ್ಲ. ಆರೋಪಿಯ ಮನೆಯಲ್ಲಿ ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ. ಆರೋಪಿ ಸದರಿ ಮನೆ ತನ್ನ ಮನೆ ಎಂದು ಹೇಳಿದ ಕಾರಣ ಸದರಿ ಮನೆ ಆರೋಪಿಯ ಮನೆ ಎಂದು ಕಾತರಿ ಆಗಿತ್ತು. ಸದರಿ ಮನೆ ಆರೋಪಿಗೆ ಸೇರಿದ ಮನೆ ಎಂಬ ಬಗ್ಗ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರಲಿಲ್ಲ. ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ ಮಂಚದ ಮೇಲೆ ಇತ್ತು ಎಂದು ತೋರಿಸುವ ಬಗ್ಗ ಸ್ಥಳದಲ್ಲಿ ಯಾವುದೇ ಛಾಯಾ ಚಿತ್ರ ತೆಗೆದಿರಲಿಲ್ಲ. ಸ್ಥಳದಲ್ಲಿ ಪ್ರತ್ಯೇಕವಾಗಿ ಯಾವುದೇ ಅಮಾನತ್ತು ಮಹಜರ್ ಮಾಡಿರಲಿಲ್ಲ.

**2.** ನಾನು ಹೇಳಿದಂತೆ ಪ್ರಾಸಾ.**1** ರವರಿಗೆ ಗಾಂಜಾ ಮಾರಾಟದ ಬಗ್ಗ ಯಾವುದೇ ಮಾಹಿತಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾವು ಟಿ. ಬಿ. ಬಡಾವಣೆಯ ಆಟೋ ವೃತ್ತದ

ಬಳಿ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಯಾವುದೇ ಆಟೋ ಬಂದಿರಲಿಲ್ಲ ಮತ್ತು ಅದರಲ್ಲಿ ಹರೀಶ್ ಎಂಬುವವರು ಇರಲಿಲ್ಲ ಎಂದರೆ ಸರಿಯಲ್ಲ. ಹರೀಶ್ ಎಂಬ ಯಾವುದೇ ವ್ಯಕ್ತಿಯನ್ನು ನಾವು ವಿಚಾರಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಹರೀಶ್ ಎಂಬುವವರು ನಮ್ಮನ್ನು ಆರೋಪಿಯ ಮನೆಯ ಬಳಿ ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಯ ಮನೆಯ ಮೇಲೆ ದಾಳಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.5 ಮತ್ತು 6 ರಲ್ಲಿ ಕಾಣುವ ಮನೆ ಆರೋಪಿಗೆ ಸೇರಿದ ಮನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಾವು ಯಾವುದೇ ಮಹಜರ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯಿಂದ ಯಾವುದೇ ಗಾಂಜಾವನ್ನು ಅಮಾನತ್ತು ಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಯಾರೂ ಕೇಳಿ ಪಡೆದುಕೊಳ್ಳದ ಗಾಂಜಾವನ್ನು ಉಪಯೋಗಿಸಿ ನಮ್ಮ ಠಾಣಾ ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶೋಧನಾ ವಾರೆಂಟ್, ಜಪ್ತಿ ಚೀಟಿ ಹಾಗೂ ಮಹಜರ್ ನ್ನು ನಮ್ಮ ಠಾಣೆಯಲ್ಲಿ ಕುಳಿತು ತಯಾರು ಮಾಡಿದ್ದು ಅದನ್ನು ನಾನು ನಮ್ಮ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು

ನಾಗಮಂಗಲ.